## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ. ನಂ. 102/25**

ಚಾ.ಸಾ. 1

ಫ್ರಾ.ಸಾ.9

| | | |
|---|---|---|
| ಸಾಕ್ಷಿದಾರರ ಹೆಸರು | – | ಬಿ ಅಶ್ವಿನಿ |
| ಗಂಡನ ಹೆಸರು | – | ಪಿ ಪ್ರವೀಣಕುಮಾರ |
| ವಯಸ್ಸು | – | 36 ವರ್ಷ |
| ಉದ್ಯೋಗ | – | ಡಿ ವಾಯ್ ಎಸ್ ಪಿ ಸಿಐಡಿ ಬೆಂಗಳೂರು |
| ವಾಸ್ತವ್ಯ | – | ಬೆಂಗಳೂರು |

(ಇಂದು ದಿನಾಂಕಃ 20-07-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ನಾನು 25-06-2024 ರಿಂದ 18-05-2026 ರ ವರೆಗೆ ನಾನು ಕಾರವಾರ ಶಹರ ಪೊಲೀಸ್ ಠಾಣೆಯಲ್ಲಿ ಡಿ ವಾಯ್ ಎಸ್ ಪಿ ಆಗಿ ಕರ್ತವ್ಯನಿರ್ವಹಿಸಿರುತ್ತೇನೆ.

ದಿನಾಂಕಃ 17-08-2024 ರಂದು ಸಾಯಂಕಾಲ 6.15 ಗಂಟೆಗೆ ನಾನು ಠಾಣೆಯ ಕರ್ತವ್ಯದಲ್ಲಿದ್ದಾಗ ನನಗೆ ಬಾತ್ಮಿದಾರರು ಕಾರವಾರ ನಗರದ ಬಿಲ್ಟ ಸರ್ಕಲ್ ಮೇಲು ಸೇತುವೆ ರಸ್ತೆ ಕೆಳಗೆ 3 ಜನ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಮಾಹಿತಿ ಬಂದಿದ್ದು ಅದನ್ನು ಸ್ವಿಕರಿಸಿ ಮೇಲಾಧಿಕಾರಿಗಳಿಗೆ ವಿಷಯವನ್ನು ತಿಳಿಸಿದ್ದೇನೆ. ಅವರಿಂದ ಲಿಖಿತವಾಗಿ ದಾಳಿಗೆ ಅನುಮತಿ ಪಡೆದುಕೊಂಡಿದ್ದೇನೆ. ದಾಳಿಯ ಸಮಯದಲ್ಲಿ ಪತ್ರಾಂಕಿತ ಅಧಿಕಾರಿಗಳ ಹಾಜರಾತಿಗಾಗಿ ಅವರಿಗೆ ಕೋರಿ ಪತ್ರ ಬರೆದಿದ್ದೇನೆ. ಚಾಸಾ 11 ರವರನ್ನು ಬರಮಾಡಿಕೊಂಡು ನಮ್ಮ ಸಿಬ್ಬಂದಿ ಹಾಗೂ ಪತ್ರಾಂಕಿತ ಅಧಿಕಾರಿ ಸೇರಿ 6.25 ಗಂಟೆಗೆ ನಮ್ಮ ಇಲಾಖಾ ವಾಹನದಲ್ಲಿ ಠಾಣೆಯನ್ನು ಬಿಟ್ಟು ಮಾರ್ಗ ಮಧ್ಯದಲ್ಲಿ ಚಾಸಾ 2 ಮತ್ತು 3 ಇವರನ್ನು ಬರಮಾಡಿಕೊಂಡು ವಿಷಯವನ್ನು ತಿಳಿಸಿ ದಾಳಿ ಮಾಡಲು ಸಹಕರಿಸಲು ಕೇಳಿದ್ದು ಅವರು ಒಪ್ಪಿಕೊಂಡಿದ್ದಾರೆ . ಮೇಲಾಧಿಕಾರಿಗಳಿಂದ ಬಂದಂತಹ ಅನುಮತಿ ಪತ್ರವನ್ನು ನಿಪಿ–

14 ಎಂದು ಗುರುತಿಸಲಾಯಿತು. ನಂತರ ಮಾಹಿತಿ ಬಂದ ಸ್ಥಳಕ್ಕೆ ಹೋಗಿ ನೋಡಲಾಗಿ ಮೂರು ಜನ ಆರೋಪಿತರು ಗಾಂಜಾವನ್ನು ಮಾರಾಟ ಮಾಡುತ್ತಿದ್ದರು. ಅವರ ಮೇಲೆ ದಾಳಿ ಮಾಡಿ 3 ಜನರನ್ನು ಹಿಡಿದುಕೊಂಡಿದ್ದೇವೆ . ಅವರನ್ನು ವಿಚಾರಿಸಲಾಗಿ 1 ನೇ ಆರೋಪಿಯ ಹೆಸರು ಸಾಹಿಲ್ ತಾಂಡೇಲ್ , ಕಾರವಾರ , 2 ನೇ ಆರೋಪಿ ಪ್ರಜ್ವಲ್ ಬಿಣಗಾ ಗ್ರಾಮ , 3 ನೇ ಆರೋಪಿ ಅರ್ಶನ್ ಗವಸ್ಕರ ಚಿತ್ತಾಕುಲಾ ಎಂದು ಹೇಳಿದ್ದಾರೆ . ನಂತರ 1 ನೇ ಆರೋಪಿಯ ಕೈಯಲ್ಲಿ ಇದ್ದಂತಹ ಪ್ಲಾಸ್ಟಿಕ್ ಕವರನ್ನು ಪರಿಶೀಲನೆ ಮಾಡಲಾಗಿ ಅದರಲ್ಲಿ ಒಣಗಿದ ಹೂವು, ಬೀಜ, ಎಲೆಗಳುಳ್ಳ ಗಾಂಜಾ ಘಾಟು ವಾಸನೆ ಇರುವ ಪದಾರ್ಥ ಎಂದು ಕಂಡುಬಂದಿದೆ. ಅದನ್ನು ಗಾಂಜಾ ಪದಾರ್ಥ ಎಂದು ಖಚಿತಪಡಿಸಿಕೊಂಡು ಅದನ್ನು ಎಲ್ಲಿಂದ ತಂದಿರುವುದಾಗಿ ಕೇಳಿರುವುದಾಗಿ ಸದರಿಯವರು ತಾವು ಮೂರೂ ಜನ ಸೇರಿ ಗೋವಾದಿಂದ ತಂದು ಇಲ್ಲಿ ಮಾರಾಟ ಮಾಡುವುದಾಗಿ ಹೇಳಿದ್ದಾರೆ. ಚಾಸಾ 11 ರ ಸಮಕ್ಷಮದಲ್ಲಿ ಪಂಚನಾಮೆಯನ್ನು ಜರುಗಿಸಿ ಅವುಗಳನ್ನು ವಶಕ್ಕೆ ಪಡೆದು ತೂಕ ಮಾಡಲಾಗಿ 411 ಗ್ರಾಮ್ ಇದ್ದುದು ಕಂಡುಬಂದಿದೆ. ಸದರಿ ಸ್ಥಳದಲ್ಲಿ ಪಂಚನಾಮೆ ಮಾಡಿ ಪಂಚನಾಮಾ ಕ್ರಮ ಜರುಗಿಸಿ ರಾಸಾಯನಿಕ ಪರೀಕ್ಷೆಗಾಗಿ ಗಾಂಜಾವನ್ನು ತೆಗೆದಿರಿಸಿ ಅಮಾನತ್ತುಪಡಿಸಿಕೊಂಡಿದ್ದೇವೆ. ಸ್ಥಳದಲ್ಲಿ ಭಾವಚಿತ್ರ ತೆಗೆದಿದ್ದೇವೆ. 1 ನೇ ಆರೋಪಿಯನ್ನು ಚಾಸಾ 11 ರ ಸಮಕ್ಷಮದಲ್ಲಿ ಅಂಗಶೋಧನೆ ಮಾಡಲಾಗಿ ಆತನ ಪ್ಯಾಂಟ್ ಜೇಬಿನಲ್ಲಿ ಒಂದು ಮೊಬೈಲ್ ಫೋನ್ ಇದ್ದು ಅದನ್ನೂ ಸಹ ಪಂಚನಾಮೆ ಕಾಲಕ್ಕೆ ಅಮಾನತ್ತು ಪಡಿಸಿಕೊಂಡಿದ್ದೇವೆ. ಆತನ ಬಳಿ ಇದ್ದ ದ್ವಿಚಕ್ರ ವಾಹನ ಪರಿಶೀಲಿಸಲಾಗಿ ಕೆಎ-30-ಎಕ್ಸ-0125 ಆಗಿತ್ತು. ಅದನ್ನು ವಶಕ್ಕೆ ಪಡೆದುಕೊಂಡಿದ್ದೇವೆ. ನಂತರ ಆರೋಪಿಯೊಂದಿಗೆ ಮುದ್ದೆಮಾಲುಗಳನ್ನು ತೆಗೆದುಕೊಂಡು ಠಾಣೆಗೆ ಬಂದಿದ್ದೇವೆ. ಆರೋಪಿಯ ವಿರುದ್ಧ ಸರ್ಕಾರದ ಪರವಾಗಿ ಪ್ರಥಮ ವರ್ತಮಾನ ಹೇಳಿಕೆ ನೀಡಿದ್ದೇನೆ. ಪ್ರಥಮ ವರ್ತಮಾನ ಹೇಳಿಕೆಯನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದ ಭಾವ ಚಿತ್ರಗಳನ್ನು

ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿ.ಪಿ.2 ಮತ್ತು ನಿ.ಪಿ.3 ಎಂದು ಗುರುತಿಸಲಾಗಿದೆ. ನಂತರ ಮೇಲಾಧಿಕಾರಿಗಳಿಗೆ ವಿಶೇಷ ವರದಿಯನ್ನು ಸಲ್ಲಿಸಿದ್ದೇನೆ. ಮೇಲಾಧಿಕಾರಿಗಳು ಕೊಟ್ಟಂತಹ ವರದಿಯನ್ನು ನಿಪಿ–15 ಎಂದು, ಸಾಕ್ಷಿಯ ಸಹಿಯನ್ನು ನಿಪಿ–15(ಎ) ಎಂದು ಗುರುತಿಸಲಾಯಿತು .

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ಪಿ ಟಿ ವಕೀಲರಿಂದಃ**

ನಾನು ಹೇಳಿದ ದಿನಾಂಕದಂದು ದಾಳಿಗೆ ಹೋಗಿಲ್ಲ ಅನ್ನುವುದು ಸರಿಯಲ್ಲ. ನನಗೆ ಯಾವುದೇ ಖಚಿತ ಮಾಹಿತಿ ಬಂದಿರಲಿಲ್ಲ ಅನ್ನುವುದು ಸರಿಯಲ್ಲ. ನಾನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿ ಅನುಮತಿ ಪಡೆದುಕೊಂಡಿಲ್ಲ ಅನ್ನುವುದು ಸರಿಯಲ್ಲ. ಘಟನಾ ಸ್ಥಳಕ್ಕೆ ಪಂಚರನ್ನು ಕರೆದುಕೊಂಡು ಹೋಗಿಲ್ಲ ಮತ್ತು ಚಾಸಾ 11 ಇವರಿಗೆ ಮನವಿ ಕೊಟ್ಟಿಲ್ಲ ಮತ್ತು ಅವರೊಂದಿಗೆ ದಾಳಿಗೆ ಹೋಗಿಲ್ಲ ಅನ್ನುವುದು ಸರಿಯಲ್ಲ. 1 ನೇ ಆರೋಪಿ ಮೇಲೆ ದಾಳಿ ಮಾಡಿಲ್ಲ ಮತ್ತು ಆರೋಪಿಯಿಂದ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಅನ್ನುವುದು ಸರಿಯಲ್ಲ. ಸ್ಥಳದಲ್ಲಿ ಯಾವುದೇ ಮಹಜರನ್ನು ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಅನ್ನುವುದು ಸರಿಯಲ್ಲ. 1 ನೇ ಆರೋಪಿ ಯಾವುದೇ ಅಪರಾಧ ಮಾಡದಿದ್ದರೂ ಸಹ ಆತನ ವಿರುದ್ಧ ಸುಳ್ಳು ಕೇಸನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ